## **Evidence recorded through VC**

## **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 509/2019**

**ಸಿ.ಡಬ್ಲ್ಯೂ- 4 ಪಿ.ಡಬ್ಲ್ಯೂ- 9**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ್ |
| ತಂದೆಯ ಹೆಸರು | : | ಕೇಶವಶೆಟ್ಟಿ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ ಸ್ಥಳ | : | ಹುಣಸೂರು |

**ದಿನಾಂಕ 07.08.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2011 ರಿಂದ 2022 ರವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 06.09.2017 ರಂದು ಮೈಸೂರು ಜಿಲ್ಲಾದ್ಯಂತ ಬಿ ಜೆ ಪಿ ಯುವಮೂರ್ಚಾ ಘಟಕದವರು ಮಂಗಳೂರು ಚಲೋ ಶೀರ್ಷಿಕೆ ಅಡಿಯಲ್ಲಿ ಬೈಕ್ ರ್ಯಾಲಿ ಹಮ್ಮಿಕ್ಕೊಂಡಿದ್ದು, ಯಾವುದೇ ರ್ಯಾಲಿ ಅಥವಾ ಪ್ರತಿಭಟನೆ ಮಾಡಬಾರದು ಎಂದು ಡಿಸಿ ಆದೇಶ ಇದ್ದರೂ ಸಹ ಆರೋಪಿತರು ಬೈಕ್ ರೈಡ್ ಹೋಗುತ್ತಿದ್ದರಿಂದ ಚಾಸಾ 23 ರವರು ಅದನ್ನು ತಡೆಯಲು ಚಾಸಾ 1 ರವರನ್ನು ಮತ್ತು ಸಿಬ್ಬಂದಿಗಳನ್ನು ಠಾಣೆಯ ಮುಂದೆ ಬಂದೋಬಸ್ತ್ ಗೆ ನೇಮಕ ಮಾಡಿರುತ್ತಾರೆ. ಅದರಂತೆ ರಸ್ತೆಗೆ ಬ್ಯಾರಿಕೇಟ್ ಅಳವಡಿಸಿರುತ್ತಾರೆ. ಸುಮಾರು11 ಗಂಟೆ ಸಮಯದಲ್ಲಿ 40 ರಿಂದ

50 ಜನರು ಬಿ ಜೆ ಪಿ ಬಾವುಟಗಳನ್ನು ಹಿಡಿದುಕೊಂಡು ಹೆಚ್ ಡಿ ಕೋಟೆ ಬಸ್ ನಿಲ್ದಾಣದಿಂದ ಹುಣಸೂರು ಕಡೆಗೆ ಹೊಗಲು ಬಂದಾಗ ಚಾಸಾ 1 ಮತ್ತು 23 ರವರು ಮತ್ತು ನಮ್ಮ ಸಿಬ್ಬಂದಿಗಳು ಸೇರಿ ಬೈಕ್ ರ್‍ಯಾಲಿಯನ್ನು ತಡೆದು ಡಿಸಿ ಆದೇಶವನ್ನು ತಿಳಿಸಿ ವಾಪಸ್ಸು ಹೋಗಲು ತಿಳಿಸಿರುತ್ತಾರೆ. ಆಗ ಬಿಜೆಪಿ ಕಾರ್ಯಕರ್ತರನ್ನು ಬ್ಯಾರಿಕೇಡ್ ಅನ್ನು ತಳ್ಳಿ ಮಂದೆ ಹೋಗಲು ಪ್ರಯತ್ನಿಸಿದ್ದರಿಂದ ರ್‍ಯಾಲಿ ಹೋಗುತ್ತಿದ್ದ 47 ಕಾರ್ಯಕರ್ತರು ಮತ್ತು 12 ಬೈಕ್ ಗಳನ್ನು ಅಮಾನತುಪಡಿಸಿಕೊಂಡಿರುತ್ತೇವೆ. ನಂತರ ಚಾಸಾ 1 ರವರು ಪ್ರಕರಣ ದಾಖಲಿಸಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸದರಿ ದಿನ ನಾನು ಬೆಳಿಗ್ಗೆ 7 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದೆ. ಸದರಿ ದಿನ ಹೆಚ್ ಡಿ ಕೋಟೆ ಪೋಲೀಸ್ ಠಾಣೆ ಮುಂಭಾಗ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಆಗಿದ್ದೆ. ಬೈಕ್ ನಲ್ಲಿ ಸುಮಾರು 47 ಜನ ಇದ್ದು, 11.45 ಗೆ ಬಂದಿರುತ್ತಾರೆ. ನಿಖರವಾಗಿ ಎಲ್ಲಾರ ಹೆಸರು ಹೇಳುತ್ತೀರಾ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ ಅದೇ ರೀತಿ ಬೈಕ್ ನಂಬರ್ ಹೇಳುತ್ತೀರಾ ಎಂದರೆ ಆಗುವುದಿಲ್ಲ ಎಂದು ನುಡಿಯುತ್ತಾರೆ. 500 ಮೀಟರ್ ಅಂತರದಿಂದ ಬೈಕ್ ರ್‍ಯಾಲಿ ಬರುವುದನ್ನು ನೋಡಿರುತ್ತೇನೆ. ಬೈಕ್ ಗಳ ನಂಬರ್ ಹೇಳುತ್ತೀರಾ ಎಂದರೆ ಕೆಲವು ಬೈಕ್ ಗಳ ನಂಬರ್ ಹೇಳುತ್ತೀನಿ ಎಂದು ನುಡಿಯುತ್ತಾರೆ. ಸದರಿ ದಿನ ಆರೋಪಿತರು ಮಂಗಳೂರು ಚಲೋ ಪ್ರತಿಭಟನೆಯಲ್ಲಿ ಭಾಗವಹಿಸಿರಲಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕೋಸ್ಕರ ದಾಖಲಿಸಿದ ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**